ಅನುಬಂಧ–1

ಸೇಡಂ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಬಾಕಿ ಇರುವ ಬಿಲ್ಲುಗಳ ವಿವರ :

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಸೇಡಂ ತಾಲ್ಲೂಕು	ಚಿಂಚೋಳಿ ತಾಲ್ಲೂಕು
1	2059	–	4.31
2	2216 ವಸತಿ	–	3.73
3	3054 (ಯೋಜನೆ)	25.40	43.03
4	3054 ರಾಜ್ಯ ಹೆದ್ದಾರಿ	–	126.58
5	5054 ನಂಜುಂಡಪ್ಪ	10.98	5.90
6	5054 SCSP (KSHIP)	8.83	1.91
7	5054 TSP (KSHIP)	2.12	0.88
8	4059	–	10.27
9	5054 ಇತರೆ ರಸ್ತೆ ನಿರ್ಮಾಣ	6.04	–
10	ನಬಾರ್ಡ್	47.53	–
		100.90	196.61

827 ಶ್ರೀ ಶ್ರೀನಿವಾಸ್.ಎಂ (ಮಂಡ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ಮಿನಿ ವಿಧಾನಸೌಧ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಶಂಕುಸ್ಥಾಪನೆಯಾಗಿದ್ದರೂ ಸಹ ಇದುವರೆವಿಗೂ ಕಟ್ಟಡದ ಕಾಮಗಾರಿ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಇ) ಮಿನಿ ವಿಧಾನ ಸೌಧದ ಕಟ್ಟಡದ ಕಾಮಗಾರಿಗಾಗಿ ಸರ್ಕಾರ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು;

ಈ) ಮಿನಿ ವಿಧಾನ ಸೌಧದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಮಂಡ್ಯ ನಗರದಲ್ಲಿ ಮಿನಿ ವಿಧಾನಸೌಧದ ಕಾಮಗಾರಿಯ ರೂ.100.00 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಟೆಂಡರ್ ಮೂಲಕ ಗುತ್ತಿಗೆದಾರರಿಗೆ ವಹಿಸಲು ಗುತ್ತಿಗೆದಾರರು ಸಂಧಾನಕ್ಕೆ ಹಾಜರಾಗದೇ ಅವರು ದರಗಳನ್ನು ಕಡಿಮೆಗೊಳಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದರಿಂದ ಹಾಗೂ ಗುತ್ತಿಗೆ ಕಾಲಾವಧಿ ವಿಸ್ತರಣೆಯನ್ನು ನೀಡದಿದ್ದ ಕಾರಣ ಅವರ ಟೆಂಡರ್‌ನ್ನು ರದ್ದುಗೊಳಿಸಿ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯುವಂತೆ ನಿರ್ದೇಶನ ನೀಡಲಾಗಿದ್ದು, ಆದರೆ ಸದರಿ ಕಾಮಗಾರಿಯು 2008–09ನೇ ಸಾಲಿನ ಆಯವ್ಯಯದಲ್ಲಿ ಸೇರದಿದ್ದ ಕಾರಣ ಟೆಂಡರ್ ಆಹ್ವಾನಿಸಿರುವುದಿಲ್ಲ.

ಇ) ಇಲ್ಲ.

ಈ) ಅನುದಾನದ ಲಭ್ಯತೆಯ ನಂತರ ಪರಿಶೀಲಿಸಲಾಗುವುದು.

814 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿವೃತ್ತ ಸರ್ಕಾರಿ ನೌಕರರಿಗೆ ವೈದ್ಯಕೀಯ ನೆರವಿನ ಸೌಲಭ್ಯವನ್ನು ಸರ್ಕಾರ ಒದಗಿಸಿ ಕೊಟ್ಟಿದೆಯೇ;

ಆ) ಹಾಗಿದ್ದಲ್ಲಿ, ಈ ಸೌಲಭ್ಯಗಳನ್ನು ನಿವೃತ್ತಿ ಹೊಂದಿದವರಿಗೂ ನೀಡುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ವೃದ್ಧಾಪ್ಯದಲ್ಲಿರುವ ಮತ್ತು ಕೆಲವೊಂದು ಅಸಹನೀಯ ಪರಿಸ್ಥಿತಿಯಲ್ಲಿರುವ ಅವರುಗಳಿಗೆ ವೈದ್ಯಕೀಯ ಸೌಲಭ್ಯವನ್ನು ಶೀಘ್ರಗತಿಯಲ್ಲಿ ಒದಗಿಸಿಕೊಡಲು ಸರ್ಕಾರ ಕ್ರಮ ಜರುಗಿಸುವುದೆ;

ಈ) ನಿವೃತ್ತರಿಗೆ ಪಿಂಚಣಿ ನೀಡಿಕೆಯಲ್ಲಿ ಅನುಷ್ಠಾನಗೊಳಿಸಿರುವ ಮತ್ತು ಪಿಂಚಣಿ ವ್ಯವಸ್ಥೆಯಲ್ಲಿ ತಂದಿರುವ ಬದಲಾವಣೆಗಳ ವಿವರಗಳೇನು?